ಎಂ ವಿ ಸಿ ನಂ.  18/2024                                                        ಪಿ ಡಬ್ಲ್ಯೂ 1

ಈ ಸಾಕ್ಷಿಯನ್ನು ದಿನಾಂಕಃ 25.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ದಿನಾಂಕ 15.11.2023 ರಂದು ನನಗೆ ಅಪಘಾತ ಆಗಿರುತ್ತದೆ .ನಾನು ಮೊಟರ್ ಸೈಕಲ್ ಕೆಎ 10–ಇಡಿ–6506 ರಲ್ಲಿ ಹೋಗುತ್ತಿದ್ದೆ . ಅದು ನನಗೆ ಸೇರಿರುತ್ತದೆ . ನಾನು ಮೊಟರ್ ಸೈಕಲ್ ಓಡಿಸಲು ಚಾಲನಾ ಪರವಾಣಗಿ ಪಡೆದಿದ್ದೇನೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಅಪಘಾತ ನನ್ನ ತಪ್ಪಿನಿಂದ ಆಯಿತು ಎಂದು ಹೇಳುವುದು ಸರಿಯಲ್ಲ. ಈ ಅಪಘಾತ ಹೊಂಡಾ ಯುನಿಕಾರ್ನ ಮೊಟರ್ ಸೈಕಲ್ ಸಂಖ್ಯೆ ಕೆಎ–02–ಕೆ ಹೆಚ್–7233 ವಾಹನದ ಚಾಲಕನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹಿಂಬದಿ ಎಂಬ ಸುನಂದಮ್ಮ ಎಂಬ ನಮ್ಮ ಅಕ್ಕನ ಸಂಬಂಧಿ ಇದ್ದಾರೆ. ಪರಿಹಾರ ಬರಲಿ ಎಂದು ಸುನಂದಮ್ಮ ರವರು ಎದುರುದಾರರ ವಾಹಂದ ಮೇಲೆ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಅಪಘಾತ ಆದ ನಂತರ ಕಾಮಗೆರೆ ಹೋಲಿ ಕ್ರಾಸ್ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇನೆ ತದನಂತರ ಜೆ ಎಸ್ ಎಸ್ ಆಸ್ಪತ್ರೆ ಮೈಸೂರಿಗೆ ಹೆಚ್ಚಿನ ಚಿಕಿತ್ಸೆಗೆ ಹೋಗಿರುತ್ತೇನೆ . ನನಗೆ ಮೂಳೆ ಮುರಿದು ಗಾಯ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣವಾಗಿ ಗುಣಮುಖವಾಗಿ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದೇನೆ ಎಂದರೆ ಸರಿಯಲ್ಲ. ನಾನು 6 ತಿಂಗಳ ಗಳ ಕಾಲ ವಿಶ್ರಾಂತಿ ಪಡೆದು ಮುಂದುವರೆದ ಚಿಕಿತ್ಸೆ ಪಡೆಯುತ್ತಿದ್ದೆ ಎಂದು ತೊರಿಸಲು ದಾಖಲೆ ಹಾಜರು ಪಡಿಸಿಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ಮೆಡಿಕಲ್ ಬಿಲ್ಲಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮೆಡಿಕಲ್ ಬಿಲ್ಲಗಳಿಗೆ ಸಂಬಂಧಪಟ್ಟಂತೆ ಸಲಹಾ ಚೀಟಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಸಾಕ್ಷಿಯೂ ನಾನು ವ್ಯವಸಾಯ ಮತ್ತು ಹಾಲು ಮಾರಾಟ ಕೆಲಸ ಮಾಡುತ್ತಿದ್ದೆ ಎಂದು ಉತ್ತರಿಸುತ್ತಾರೆ . ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಈಗ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ ನನ್ನ ವೈದ್ಯಕೀಯ 3 ಲಕ್ಷ ಮತತು ಊಟ ವಸತಿ ಮತ್ತು ಸಾರಿಗೆಗೆ 1 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 20 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–176 ರನ್ನು ಈ ಕೇಸಿಗಾಗಿ ಸೃಷ್ಟಿಮಾಡಿದೆ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಜೆಎಸ್ ಎಸ್ ಆಸ್ಪತ್ರೆಯಲ್ಲಿ ನನಗೆ ಡಾ. ವಿಜಯ ರವರು ಚಿಕಿತ್ಸೆ ಕೊಟ್ಟಿದ್ದಾರೆ.

ಮರು ವಿಚಾರಣೆ ಇಲ್ಲಃ

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,

ಓ ಹೇ ಕೇ ಸರಿ ಇದೆ,

(ಸುನೀತ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಕೊಳ್ಳೇಗಾಲ.